ದಿನಾಂಕ 09-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ವಾದಿಗಳ ಪರ ಶ್ರೀ ಸಿ ವಿ ಎನ್ ವಕೀಲರಿಂದ .

ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ದಾವಾ ಜಮೀನನ್ನು ನನ್ನ ದೊಡ್ಡಪ್ಪ ಮತ್ತು ನಾವು ಎರಡು ಎರಡು ಎಕರೆ ಪ್ರತ್ಯೇಕವಾಗಿ ಉಳುವೆ ಮಾಡುತ್ತೇವೆ. ದಾವಾ ಆಸ್ತಿ ಸರ್ವೇ ನಂಬರ 151 ಕೆ ನಿಮ್ಮ ದೊಡ್ಡಪ್ಪನಿಗೆ ಮಾತ್ರ ಸೇರಿದ್ದು, ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಮ್ಮ ದೊಡ್ಡಪ್ಪನ ಮರಣದ ನಂತರ ಸರ್ವೇ ನಂಬರ 151 ಕೆ ನಿಮ್ಮ ದೊಡ್ಡಪ್ಪನ ಹೆಂಡತಿಯ ಹೆಸರಿಗೆ ಬಂತು ಎಂದರೆ ಸರಿ. ನಿಮ್ಮ ತಂದೆ ಮತ್ತು ಕಾಕಾ ರವರ ಹೆಸರಿನಲ್ಲಿ ಬೇರೆ ಬೇರೆ ಜಮೀನುಗಳು ಇವೆ ಎಂದರೆ ಸರಿ. ಸರ್ವೇ ನಂಬರ 151 ರಲ್ಲಿನ 6 ಎಕರೆ 8 ಗುಂಟೆ ನಿಮ್ಮ ದೊಡ್ಡಪ್ಪನ ಹಿಸ್ಸೆಗೆ ಬಂದಿದ್ದು ಎಂದರೆ ಸಾಕ್ಷಿ ನಾವು ಮೂರು ಜನರ ಹಿಸ್ಸೆ ಅದರಲ್ಲಿ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನ್ನ ದೊಡ್ಡಪ್ಪನಿಗೆ ಸರ್ವೇ ನಂಬರ 151 ಅನ್ನು ಹೊರತುಪಡಿಸಿ ಬೇರೆ 3 ಎಕರೆ ಜಮೀನು ಇದೆ ಎನ್ನುತ್ತಾರೆ. ನಮ್ಮ ತಂದೆಯ ಹೆಸರಿನಲ್ಲಿ 4 ಎಕರೆ ಮತ್ತು ನಮ್ಮ ಕಾಕಾನ ಹೆಸರಿನಲ್ಲಿ 4 ಎಕರೆ ಇದೆ ಎನ್ನುತ್ತಾರೆ. ವಾದಿಯರಿಗೆ ಕಮಲಾವಳು ಯಾವುದೇ ಪಾಲು ಕೊಟ್ಟಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎನ್ನುವುದು ಸುಳ್ಳು, ಪ್ರತಿವಾದಿ 1 ಮತ್ತು ವಾದಿಯರಿಗೆ ಮಾತ್ರ ಸಂಬಂಧಿಸಿದ್ದು ಎಂದರೆ ಸಾಕ್ಷಿ ನಮಗೂ ಅದರಲ್ಲಿ ಪಾಲು ಇದೆ ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ನಿಮಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ದಾವಾ ಆಸ್ತಿಗಳನ್ನು

ಪ್ರತಿವಾದಿ 1 ರವರಿಗೆ ಜೀವನಾಂಶಕ್ಕೆ ಬಿಟ್ಟಿದ್ದೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 04-09-2018 ರಂದು ಆಗಿದೆ ಎನ್ನುವ ವಾಟಣಿ ಪತ್ರ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಅನಕ್ಷರಸ್ಥರಾದ ದೂರುಪಯೋಗ ಪಡೆದುಕೊಂಡು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ವಾಟಣಿ ಪತ್ರ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಅನಕ್ಷರಸ್ಥಳು ಮತ್ತು ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ.ಪ್ರತಿವಾದಿ 1 ರವರಿಗೆ ವಯಸ್ಸಾಗಿದೆ ಎಂದರೆ ಸರಿ. ಪ್ರತಿವಾದಿ 1 ರವರಿಗೆ ಗಂಡು ಮಕ್ಕಳು ಇಲ್ಲ, ಹೆಣ್ಣು ಮಕ್ಕಳು ಮಾತ್ರ ಇದ್ದಾರೆ ಎಂದರೆ ಸರಿ. ಪ್ರತಿವಾದಿ 1 ರವರ ಹೆಣ್ಣು ಮಕ್ಕಳಿಗೆ ಯಾವುದೇ ಆಸ್ತಿಯನ್ನು ಕೊಡಬಾರದೆಂದು ಪ್ರತಿವಾದಿ 1 ರವರ ಆಸ್ತಿಯನ್ನು ನೀವೆ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ವಾಟಣಿ ಪತ್ರ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ವಾದಿಯರು ದಿನಾಂಕ 23-09-2014 ರಂದು ತವರು ಮನೆಯ ಆಸ್ತಿಯ ಹಕ್ಕುಬಿಟ್ಟು ಪತ್ರದ ಪ್ರಕಾರ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ದೊಡ್ಡಪ್ಪನ ಆಸ್ತಿ ವಾದಿಯರಿಗೆ ಸಿಗಬಾರದೆಂಬ ಉದ್ದೇಶದಿಂದ ಪ್ರತಿವಾದಿ 1 ರವರನ್ನು ಹೆದರಿಸಿ ಬೆದರಿಸಿ ಮನೆಯಲ್ಲಿ ಇಟ್ಟುಕೊಂಡಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರನ್ನು ಸಾಕ್ಷಿ ಮಾಡಿಸಲು ನ್ಯಾಯಾಲಯಕ್ಕೆ ಕರೆತರಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಪ್ರತಿವಾದಿ 1 ರವರನ್ನು ಹೆದರಿಸಿ ಬೆದರಿಸಿ ಮನೆಯಲ್ಲಿ ಇಟ್ಟುಕೊಂಡಿದ್ದೀರಿ ಎಂದರೆ ಸರಿಯಲ್ಲ, ಪ್ರತಿವಾದಿ 1 ರವರು ಅವರ ಮನೆಯಲ್ಲೆ ಇರುತ್ತಾಳೆ. ನಿಮಗೆ ಹೆದರಿ ಪ್ರತಿವಾದಿ 1 ರವರು ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರತಿಜ್ಞಾ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

O.S.8/2019 Cross of DW 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.